65

<u>ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಡಾ|| ಉಮಾಶ್ರೀ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.</u>

**ವಿಷಯ:**

'ಶರ್ವಾಣಿ ಅಂಟಿಕ್ ಜೆಮ್ ಸ್ಟೋನ್ ಆಂಡ್ ಜುವೆಲ್ಲರಿ' ಎಂಬ ಹೆಸರಿನ ಖಾಸಗಿ ಸಂಸ್ಥೆಯೊಂದು, ಪುರಾತನ ವಸ್ತುಗಳನ್ನು ಖರೀದಿಸುವ ಮತ್ತು ಮಾರಾಟ ಮಾಡುವ ಪರವಾನಿಗೆ" ಹೊಂದಿದೆ. ಈ ಸಂಸ್ಥೆಯ ಬಳಿ ರಾಜವಂಶಸ್ಥರಿಂದ ಖರೀದಿಸಿದ ಸಂರಕ್ಷಿಸಿ ಇಟ್ಟುಕೊಂಡಿರುವ ಮೈಸೂರಿನ ಹುಲಿ ಎಂದು ಖ್ಯಾತವಾಗಿರುವ ಟಿಪ್ಪು ಸುಲ್ತಾನ್ ಅವರು ತಮ್ಮ ಆತ್ಮರಕ್ಷಣೆಗಾಗಿ ಬಳಸುತ್ತಿದ್ದ ಅತಿ ಅಪರೂಪದ ಖಡ್ಗವಿರುತ್ತದೆ ಎಂದು ತಿಳಿದುಬಂದಿದೆ.

ಟಿಪ್ಪು ಸುಲ್ತಾನ್ ಅವರ ವೈಯಕ್ತಿಕ ಶಸ್ತ್ರಾಗಾರದ ಭಾಗವಾಗಿದ್ದ ಕೆಲ ಖಡ್ಗಗಳ ಪೈಕಿ ಈ ಖಡ್ಗ ಬಹಳ ವಿಶೇಷತೆ ಹೊಂದಿದ್ದು ಈ ವಿಶೇಷ ಖಡ್ಗವನ್ನು ಟಿಪ್ಪು ಸುಲ್ತಾನ್ ಬಳಸುತ್ತಿದ್ದರು ಎಂಬುದು ಚಾರಿತ್ರಿಕ ಹಿನ್ನೆಲೆ ಇದೆ ಎಂದು ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆ, ಇದನ್ನು ಪರಿಶೀಲಿಸಿ ಅಪರೂಪದ ಖಡ್ಗವೆಂದು ತಿಳಿಸಿ ನೋಂದಾಯಿಸಿ ಪ್ರಮಾಣ ಪತ್ರ ನೀಡಿರುತ್ತದೆ.

ಈ ಖಡ್ಗದ ಮೇಲೆ ಚಿನ್ನದ ಬಣ್ಣವಿರುವ ಟಿಪ್ಪು ಸುಲ್ತಾನ್ ಹೆಸರು, ಚಂದ್ರನ ಚಿಹ್ನೆಗಳಿವೆ. ತಾಮ್ರದ ಹಿಡಿಯ ಮೇಲೆ ಚಿನ್ನದ ಲೇಪನವೂ ಇದೆ ಖಡ್ಗವು 10.16X91.44 ಸೆ.ಮೀ. ಎತ್ತರ ಮತ್ತು ಅಗಲವಿದೆ ಹಿಂದಿನ ಕಾಲದಲ್ಲಿ ಸ್ಥಳೀಯ ತಂತ್ರಜ್ಞಾನದೊಂದಿಗೆ ವಿಶೇಷ ಸ್ಟೀಲ್‌ನಿಂದ ತಯಾರಿಸಲಾಗಿದೆ ಎಂದು ಚಾರಿತ್ರಿಕ ಹಿನ್ನೆಲೆ ಹೊಂದಿರುವ ಈ ಖಡ್ಗದ ಮೇಲೆ ಟಿಪ್ಪು ಸುಲ್ತಾನ್ ಹೆಸರು ಸಹ ಇರುತ್ತದೆ ಎಂದು ತಿಳಿದು ಬಂದಿದೆ.

ಮೇಲೆ ತಿಳಿಸಿದ ಖಾಸಗಿ ಸಂಸ್ಥೆಯವರು ರಾಜವಂಶದಿಂದ ಇದನ್ನು ಖರೀದಿಸಿ ಸಂರಕ್ಷಿಸಿ ಇಟ್ಟುಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

1799 ರಲ್ಲಿ 4 ನೇ ಅಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಮರಣ ಹೊಂದಿದಾಗ ಖಡ್ಗವು ದಿವಾನ್ ಪೂರ್ಣಯ್ಯ ರವರಿಗೆ ಸಿಕ್ಕಿತ್ತು ಎಂದು ಹೇಳಲಾಗುತ್ತಿದೆ.

ಈ ಕುರಿತು ಇತಿಹಾಸ ಸಂಶೋಧಕ ಡಾ.ಬಿ.ರಾಮಾಚಾರಿ ಪ್ರತಿಕ್ರಿಯಿಸಿ, ಪುರಾತನ ವಸ್ತುಗಳನ್ನು ಖರೀದಿಸುವ ಮತ್ತು ಮಾರಾಟದ ಪರವಾನಿಗೆ ಹೊಂದಿರುವ ಖಾಸಗಿ ಸಂಸ್ಥೆಯೊಂದು ರಾಜವಂಶಸ್ಥರೊಬ್ಬರಿಂದ ಕಾನೂನಾತ್ಮಕವಾಗಿ ಖರೀದಿಸಿರುವ ಈ ಖಡ್ಗವನ್ನು ಇತಿಹಾಸ ತಜ್ಞರು, ಮುಸ್ಲಿಮ್ ಪಂಡಿತರು, ಪುರಾತತ್ವ ಇಲಾಖೆ ಅಧಿಕಾರಿಗಳು ಇದನ್ನು ಪರಿಶೀಲಿಸಿ ಅಪರೂಪದ ಖಡ್ಗವಾಗಿದ್ದು, ಇದು ಸರಕಾರದ ಸ್ವಾಧಿನದಲ್ಲಿ ಇರಬೇಕಾದ ಪುರಾತನ ವಸ್ತು ಹಾಗಾಗಿ ಸರ್ಕಾರವು ಇದನ್ನು ಖರೀದಿಸಿ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಇಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಆದ ಕಾರಣ ಈ ವಿಚಾರದ ಬಗ್ಗೆ ಪ್ರಾಚ್ಯ ಮತ್ತು ಪುರಾತತ್ವ ಹಾಗೂ ಸಂಗ್ರಹಾಲಯಗಳ ಇಲಾಖೆಯ ಮೂಲಕ ಈ ವಸ್ತುವನ್ನು ಸಂಗ್ರಹಿಸಿ ಸಂರಕ್ಷಿಸುವ ಕುರಿತು ಗಮನ ಸೆಳೆದಿರುವ ಬಗ್ಗೆ.

**ಉತ್ತರ:**

ಪುರಾತನ ವಸ್ತುಗಳನ್ನು ಖರೀದಿಸಲು ಮತ್ತು ಮಾರಾಟ ಮಾಡಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ The Antiquities and Art Treasures Act, 1972 ರ ಸೆಕ್ಷನ್ 5 ರಡಿಯಲ್ಲಿ ಲೈಸೆನ್ಸ್ ಹೊಂದಿರಬೇಕು ಹಾಗೂ ಸೆಕ್ಷನ್ 8 ರಡಿಯಲ್ಲಿ ನೋಂದಾಯಿತ ಪ್ರಾಚ್ಯವಸ್ತುವನ್ನು ಮಾರಾಟ ಮಾಡಲು

ಪರವಾನಗಿ ಹೊಂದಿರಬೇಕು. ಮತ್ತು ಸೆಕ್ಷನ್ 14 ರಡಿಯಲ್ಲಿ ಅಂತಹ ಪ್ರಾಚ್ಯವಸ್ತುಗಳನ್ನು ನೋಂದಣಿ ಮಾಡುವುದು ಕಡ್ಡಾಯವಾಗಿರುತ್ತದೆ.

'ಶರ್ವಾಣಿ ಅಂಟಿಕ್ ಜೆಮ್ ಸ್ಟೋನ್ ಆಂಡ್ ಜುವೆಲ್ಲರಿ' ಎಂಬ ಹೆಸರಿನ ಖಾಸಗಿ ಸಂಸ್ಥೆಯು ಸದರಿ ಖಡ್ಗವನ್ನು ನೋಂದಾಯಿಸಲಾಗಿದೆ ಎಂದು ತಿಳಿಸಿರುವುದರಿಂದ, ಸದರಿ ಟಿಪ್ಪುಸುಲ್ತಾನ್ ಖಡ್ಗವು ನೋಂದಣಿಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸುವ ಸಂಬಂಧ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಬೆಂಗಳೂರು ವೃತ್ತ ಇಲ್ಲಿಗೆ ಭೇಟಿ ನೀಡಿ ಮಾಹಿತಿ/ದಾಖಲೆಗಳನ್ನು ಪಡೆದು ಒದಗಿಸುವಂತೆ ದಿನಾಂಕ:17-03-2025 ರಂದು ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಅಲ್ಲದೇ ಪುರಾತನ ವಸ್ತುಗಳನ್ನು ಖರೀದಿಸುವ ಮತ್ತು ಮಾರಾಟ ಮಾಡುವ ಪರವಾನಿಗೆ ಹೊಂದಿದೆ ಎಂದು ಹೇಳುವ 'ಶರ್ವಾಣಿ ಅಂಟಿಕ್ ಜಿಮ್ ಸ್ಟೋನ್ ಅಂಡ್ ಜುವೆಲ್ಲರಿ' ಎಂಬ ಹೆಸರಿನ ಖಾಸಗಿ ಸಂಸ್ಥೆಯು ರಾಜವಂಶಸ್ಥರಿಂದ ಖರೀದಿಸಿ ಸಂರಕ್ಷಿಸಿ ಇಟ್ಟುಕೊಂಡಿದೆ ಎಂದು ಹೇಳುವ ಟಿಪ್ಪುಸುಲ್ತಾನ್ ಖಡ್ಗವನ್ನು ಪರಿಶೀಲಿಸುವ ಸಂಬಂಧ ದಿನಾಂಕ:17-03-2025 ರಂದು ಅಧಿಕಾರಿಗಳನ್ನು ನಿಯೋಜಿಸಿ ವರದಿ ನೀಡಲು ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳಿಂದ ಈ ಮೇಲ್ಕಂಡ ಖಡ್ಗದ ಪ್ರಾಚೀನತೆ ಹಾಗೂ ನೈಜತೆಯ ಬಗ್ಗೆ ವರದಿಗಳು ಬಂದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

**ಸಂಖ್ಯೆ: ಟಿಓಆರ್ 108 ಟಿಡಿವಿ 2025**

**(ಎಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು